ಮಾನ್ಯ ಕೃಷ್ಣನ್‌ರವರು ಕುಡಿಯುವ ನೀರಿನ ಬಗ್ಗೆ ಹೆಚ್ಚು ಕಡಿಮೆ ವಿಳಂಬವಾಗುತ್ತಿದೆ ಇದಕ್ಕೆ ಸರ್ಕಾರದವರು ಲಕ್ಷ್ಯ ವಹಿಸಿಲ್ಲ ಎಂದು ಹೇಳುತ್ತಾರೆ. ಎಲ್ಲೆಲ್ಲಿ ಇಂತಹ ತೊಂದರೆ ಇದೆ ಅದು ಸರ್ಕಾರದ ಗಮನಕ್ಕೆ ಬಂದಾಗ ಅಲ್ಲಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಉದಾಹರಣೆಗೆ ತುರುವೇಕೆರೆ, ಚಿಕ್ಕೋಡಿ, ಮಂಡ್ಯ ಮತ್ತಿತರ ಕಡೆಗಳಲ್ಲಿ ಇಂತಹ ತೊಂದರೆಗಳು ಬಂದಿದ್ದಾಗ್ಗೆ ತಕ್ಷಣದಲ್ಲಿ ಕಾರ್ಯಕ್ರಮ ಕೈಕೊಂಡಿದ್ದೇವೆ ಎಂದು ಹೇಳುತ್ತೇನೆ.

PAPERS LAID ON THE TABLE

SRI C. N. PATIL (Minister for Forests).—I beg to lay :

Notification No GSR 2 6 dated 24th June 1974.
The Karnataka Forest (Amendment) Rules 1974,
under section 103 of the Karnataka Forest Act, 1963.

MADAM SPEAKER.—The Notification is laid on the Table.

SRI H. C. SRIKANTIAH (Minister of State for Power).—I beg to lay :

The Annual Administration Report of the Karnataka Electricity Board for the year 1972-73.
as required under section 75 of the Electricity(Supply)Act, 1948.

MADAM SPEAKER.—Annual Administration Report of the Karnataka Electricity Board laid on the Table. Next presentation of Report.

Fifth Report of the Committee on Public Undertakings

Presentation

SRI A. A. DESAI (Athani).—I beg to present the Fifth Report of the Committee on Public Undertakings regarding the working of Karnataka State Road Transport Corporation.

MADAM SPEAKER.—The report is presented.

Notice of an Adjournment Motion

re : Alleged atrocities by police at the Cristal Glass Factory

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) —ಅಧ್ಯಕ್ಷರೇ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇದು ಬಹಳ ಮುಖ್ಯವಾದ ವಿಷಯ. ಈಗೊತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದೆಯೇ ಅಥವಾ ಪ್ರಜಾಪ್ರಭುತ್ವದ ಹಕ್ಕುಗಳು ಇವೆಯೇ ಅನ್ನುವುದು ಉದ್ಭವಿಸಿವೆ. ಈ ಮನೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೂ ಕೂಡ ಕೆಲವು ಮಂತ್ರಿಗಳು ಇದ್ದಾರೆ. ಅವರೇ ಹೇಳಲಿ. ಈ ತಿಂಗಳು ೧೪ನೇತಾರೀಖು ಮೈಸೂರು ಕ್ರಿಸ್ಟಲ್ ಗ್ಲಾಸ್ ಕಂಪನಿಯಲ್ಲಿ ಒಬ್ಬ ಟ್ರೇಡ್ ಯೂನಿಯನ್ ಮುಖಂಡ ಶಾಮಸುಂದರ, ಅನ್ನುವ ವ್ಯಕ್ತಿಯನ್ನು ಪೋಲೀಸಿನವರು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಅವರು ಅಲ್ಲಿ ಅವನನ್ನು ಹೊಡೆದದ್ದು ಅಷ್ಟಿಷ್ಟಲ್ಲ ಸತ್ತುಹೋಗುವ ಹಾಗೆ ಬಡಿದಿದ್ದಾರೆ. ಅವರು ಆಸ್ಪತ್ರೆಗೆ ದಿವಸ ಅಲ್ಲಗೆ ಹೋದದ್ದು ಶಾಂತಿಪಂಚಾಲನೆ ಮಾಡುವುದಕ್ಕೋಸ್ಕರ ಇವರು ಒಂದು ಟ್ರೇಡ್ ಯೂನಿಯನ್